# ಈ ಬಾರಿ ಗೆಲ್ಲುವನೆ?

ಗೆಲ್ಲುವಾಗ ಎಲ್ಲವೂ ಅಪ್ಪಟ ಚಿನ್ನ; ಆಕರ್ಷಕ. ಆದರೆ ಒಮ್ಮೆ ಸೋಲಿನ ಸುಳಿ ಆರಂಭವಾಯಿತೆಂದರೆ ಮುಟ್ಟಿದ್ದೆಲ್ಲ ಕಬ್ಬಿಣವಾಗುತ್ತದೆ. ಸ್ಪೇನ್‌ನ ವೃತ್ತಿಪರ ಟೆನಿಸಿಗ, ಕೋಟ್ಯಂತರ ಅಭಿಮಾನಿಗಳನ್ನು ಹೊಂದಿರುವ ರಫಾ ನಾಡೆಲ್‌ರದ್ದೂ ಈಗ ಇದೇ ಸ್ಥಿತಿ. 2008ರಲ್ಲಿ 'ವಿಶ್ವದ ನಂಬರ್ ಒನ್' ಆಟಗಾರನಾಗಿ ಜಗತ್ತನ್ನು ಆಳಿದ ರಫಾಯೆಲ್ ನಾಡೆಲ್, ಈಗ ವಿಶ್ವ ರ‍್ಯಾಂಕಿಂಗ್‌ನಲ್ಲಿ 7ನೇ ಸ್ಥಾನಕ್ಕೆ ಇಳಿದಿದ್ದಾರೆ. ಒಬ್ಬರಿಗಿಂತ ಮಿಗಿಲಾಗಿ ಒಬ್ಬರು ಅತ್ಯುತ್ತಮ ಆಟವಾಡುತ್ತಿರುವ ವಿಶ್ವ ಟೆನಿಸ್ ರಂಗದಲ್ಲಿ ಒಬ್ಬನೇ ಆಟಗಾರ ಹೆಚ್ಚು ಕಾಲ 'ನಂಬರ್ ಒನ್' ಪಟ್ಟವನ್ನು ಉಳಿಸಿಕೊಳ್ಳುವುದು ಕಷ್ಟ. ಅದಕ್ಕೆಂದೇ ವಿಶ್ವವಿಖ್ಯಾತ ಆಟಗಾರರೆಲ್ಲ ಆಗಾಗ್ಗೆ ತಮ್ಮ ಕೋಚ್‌ಗಳನ್ನು ಬದಲಾಯಿಸುತ್ತಾರೆ. ಜೊಕೊವಿಕ್‌ಗೆ ಕಳೆದ ವರ್ಷ ಬೋರಿಸ್ ಬೆಕರ್ ಕೋಚ್ ಆಗಿ ಬಂದರು. ಫೆಡರರ್‌ಗೆ ಸ್ಟೀಫನ್ ಎಡ್‌ಬರ್ಗ್ ಕೋಚ್ ಆದರು. ಆ್ಯಂಡಿ ಮುರ್ರೆ ಇವಾನ್ ಲೆಂಡ್ಲ್ ಅವರನ್ನು ಕೋಚ್ ಆಗಿ ನೇಮಿಸಿದ ಬಳಿಕ, 2012ರಲ್ಲಿ ಯುಎಸ್ ಓಪನ್ ಮತ್ತು 2013ರಲ್ಲಿ ವಿಂಬಲ್ಡನ್ ಪ್ರಶಸ್ತಿ ಗೆದ್ದರು. ಈ ಎಲ್ಲ ಕೋಚ್‌ಗಳೂ ಒಂದು ಕಾಲದ 'ವಿಶ್ವ ನಂಬರ್ ಒನ್' ಟೆನಿಸ್ ಆಟಗಾರರೇ. ಆದರೆ ರಫಾ ಈ ವಿಷಯದಲ್ಲಿ ಅತ್ಯಂತ ಭಿನ್ನ. ಆತ ಕಳೆದ 15 ವರ್ಷಗಳಿಂದ ತನ್ನ ಕೋಚ್ ಅನ್ನು ಬದಲಾಯಿಸಿಯೇ ಇಲ್ಲ! ಆತನ ಅಂಕಲ್ ಟೋನಿ ನಡಾಲ್ ಅವರೇ ಕಳೆದ 15 ವರ್ಷಗಳಿಂದ ರಫಾಗೆ ಕೋಚಿಂಗ್ ನೀಡುತ್ತಿದ್ದಾರೆ. ಕೋಚ್ ಮಾತ್ರವಲ್ಲ, ಆತನ ಬೆಂಬಲದ ತಂಡವೂ ಅದೇ ಇದೆ. ಕಳೆದ ವಾರ ಮ್ಯಾಡ್ರಿಡ್ ಓಪನ್‌ನಲ್ಲಿ ಮುರ್ರೆ ವಿರುದ್ಧ ಸೋಲಪ್ಪಿದಾಗ ರಫಾಗೆ ಪತ್ರಕರ್ತರು ಮತ್ತೆ ಕೇಳಿದರು– 'ನಿಮ್ಮ ಕೋಚ್ ಅನ್ನು ಬದಲಾಯಿಸುತ್ತೀರಾ?' ಎಂದು. ರಫಾ ನೀಡಿದ ಉತ್ತರ– 'ಸೋತರೆ ಅದಕ್ಕೆ ನಾನೇ ಕಾರಣ. ಚೆನ್ನಾಗಿ ಆಡಲಿಲ್ಲವಾದ್ದರಿಂದ ಸೋತೆ. ಕೋಚ್ ಬದಲಾಯಿಸುವ ಪ್ರಶ್ನೆಯೇ ಇಲ್ಲ. ಏಕೆಂದರೆ ಅವರು ನನ್ನ ಅಂಕಲ್. ಇಷ್ಟು ವರ್ಷದುದ್ದಕ್ಕೂ ನಾನು ಗೆಲ್ಲುತ್ತಾ ಬಂದದ್ದಕ್ಕೆ ಅವರೂ ಕಾರಣರಲ್ಲವೆ?' ಸೆಲೆಬ್ರಿಟಿಗಳಲ್ಲಿ ಇಂತಹ ನಿಷ್ಠೆ ಕಂಡುಬರುವುದು ಅಪರೂಪ.

ರಫಾ ಹೆಗ್ಗಳಿಕೆಯೆಂದರೆ ಆವೆ ಮಣ್ಣಿನ ಅಂಕಣದ ಆಟ. ಆತ ಈಗಲೂ 'ಕಿಂಗ್ ಆಫ್ ಕ್ಲೇ ಕೋರ್ಟ್!' ಆದರೆ ಈ ವರ್ಷದ ಆವೆ ಅಂಕಣದಲ್ಲಿ ಆತ ಸತತ ನಾಲ್ಕನೇ ಸೋಲು ಕಂಡಿದ್ದಾನೆ. ಇನ್ನೇನು ಹತ್ತನೇ ಫ್ರೆಂಚ್ ಟೈಟಲ್ ಮುಂದಿನ ವಾರದಿಂದ (ಮೇ.24ರಿಂದ) ಆರಂಭವಾಗಲಿದೆ. 2005ರಿಂದ 2014ರವರೆಗೆ ಸತತ 9 ಸಲ ಫ್ರೆಂಚ್ ಓಪನ್ ಪ್ರಶಸ್ತಿ ಗೆದ್ದಾತ ಈ ರಫಾ ನಾಡೆಲ್. ಈ ಸಲ ಹತ್ತನೇ ಸಲ ಫ್ರೆಂಚ್ ಓಪನ್ ಗೆಲ್ಲುತ್ತಾನೆಯೆ ಎನ್ನುವುದೀಗ ವಿಶ್ವ ಟೆನಿಸ್ ರಂಗದಲ್ಲಿ ಭಾರೀ ಕುತೂಹಲ ಮೂಡಿಸಿರುವ ಪ್ರಶ್ನೆ. ಹಾಗೆ ನೋಡಿದರೆ ಪ್ಯಾರಿಸ್‌ನಲ್ಲಿ ಈವರೆಗೆ ಈತ ಒಂದೂ ಪಂದ್ಯ ಸೋತಿಲ್ಲ.

ಸತತ 10 ವರ್ಷಗಳ ಕಾಲ ಒಂದು ಗ್ರ್ಯಾನ್‌ಸ್ಲಾಮ್ ಗೆದ್ದ ವಿಶ್ವ ದಾಖಲೆ ಇರುವುದು ರಫಾ ಹೆಸರಲ್ಲೇ. 9 ಸಲ ಸತತವಾಗಿ ಗ್ರ್ಯಾನ್‌ಸ್ಲಾಮ್ ಗೆದ್ದ ಪುರುಷ ಸ್ಪರ್ಧಿಯೂ ಈತನೊಬ್ಬನೇ. ಬ್ಯಾರ್ನ್ ಬಾರ್ಗ್, ಪೀಟ್ ಸಾಂಪ್ರಾಸ್, ರೋಜರ್ ಫೆಡರರ್ ಮುಂತಾದ ಖ್ಯಾತನಾಮರಿಗೂ ಸತತ 8 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳಷ್ಟೇ ಸಾಧ್ಯವಾದದ್ದು. 2008ರ ಒಲಿಂಪಿಕ್ ಗೋಲ್ಡ್ ಮೆಡಲಿಸ್ಟ್, ಒಟ್ಟು 14 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳ ವಿಜೇತ, ವರ್ಲ್ಡ್ ಎಟಿಪಿ ಟೂರ್ (1000)ನಲ್ಲಿ ಒಟ್ಟು 27 ಗೆಲುವು– ಹೀಗೆ ರಫಾ ಸಾಧನೆ ಮೇರು ಪರ್ವತದಂತಿದೆ. ಹಸಿರು ಹುಲ್ಲು, ಆವೆ ಅಂಕಣ ಮತ್ತು ಹಾರ್ಡ್ ಕೋರ್ಟ್– ಹೀಗೆ ಮೂರು ವಿಭಿನ್ನ ಅಂಕಣಗಳಲ್ಲೂ ಆಡಿ ಪ್ರಶಸ್ತಿ ಗೆದ್ದಾತ ರಫಾ. ಈ ರೀತಿ ಮೂರು ವಿಭಿನ್ನ ಅಂಕಣಗಳಲ್ಲಿ ಈವರೆಗೆ ಎರಡು ಗ್ರ್ಯಾನ್ ಸ್ಲಾಮ್ ಪ್ರಶಸ್ತಿಗಳ ದಾಖಲೆ ಮಾಡಿದವರು ಜಗತ್ತಿನಲ್ಲಿ ಇಬ್ಬರೇ– ಒಬ್ಬ ಮ್ಯಾಟ್ಸ್ ವಿಲಾಂಡರ್, ಇನ್ನೊಬ್ಬಾತ ರಫಾ! ಈವರೆಗೆ ಟೆನಿಸ್‌ನಲ್ಲಿ ರಫಾ ಗೆದ್ದಿರುವ ಪ್ರಶಸ್ತಿ ಮೊತ್ತ 7.17 ಕೋಟಿ ಡಾಲರ್ ದಾಟಿದೆ. ಇಷ್ಟೆಲ್ಲ ಇದ್ದೂ ರಫಾ ಅಭಿಮಾನಿಗಳಲ್ಲಿ ಚಿಂತೆ ಮೂಡಿದೆ. ಏಕೆಂದರೆ ಇದೇ ಮೊದಲ ಬಾರಿಗೆ ಫ್ರೆಂಚ್ ಓಪನ್ ಟೂರ್ನಿಯ ಅಧಿಕಾರಿಗಳು, 'ರಫಾಗೆ ಈ ಸಲ ಟಾಪ್ ಸೀಡ್ ಕೊಡುವ ಸಾಧ್ಯತೆ ಇಲ್ಲ' ಎಂದು ಪ್ರಕಟಿಸಿದ್ದಾರೆ. ಸಾಮಾನ್ಯವಾಗಿ ಟಾಪ್ ಸೀಡ್ ಗಳಿಸಿದರೆ, ಆ ಟೂರ್ನಿಯಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸುವವರೆಗೆ ಮೊದಲು ನಾಲ್ಕು ಸೀಡ್ ಪಡೆದ ಆಟಗಾರರನ್ನು ಎದುರಿಸುವ ಅವಕಾಶ ಸಿಗುವುದಿಲ್ಲ. ಕಳೆದ ವರ್ಷ ಕೈಮಣಿಗಂಟಿನ ಶಸ್ತ್ರಚಿಕಿತ್ಸೆಗೆ ಮತ್ತು ಅಪೆಂಡಿಸೈಟಿಸ್ ಶಸ್ತ್ರಚಿಕಿತ್ಸೆಗೆ ಒಳಗಾಗಿರುವ ರಫಾ, ತನ್ನ ಹಿಂದಿನ ರಭಸವನ್ನು ಉಳಿಸಿಕೊಂಡಿದ್ದಾನೆಯೆ ಎಂಬ ಬಗ್ಗೆಯೂ ಅನುಮಾನಗಳಿವೆ. ಸತತ ನಾಲ್ಕು ಕ್ಲೇ ಕೋರ್ಟ್ ಸೋಲುಗಳ ಬಗ್ಗೆ ರಫಾನನ್ನು ಪತ್ರಕರ್ತರು ಪ್ರಶ್ನಿಸಿದರೆ, 'ಸೋಲು ಗೆಲುವು ಇದ್ದದ್ದೇ' ಎಂದು ಮುಗುಳ್ನಕ್ಕಿದ್ದಾನೆ. ಅಂದರೆ ಈ ಸಲ ಫ್ರೆಂಚ್ ಓಪನ್ ಗೆಲ್ಲುವ ಆತ್ಮವಿಶ್ವಾಸ ಆತನಲ್ಲೂ ಇಲ್ಲವೆಂದು ಅರ್ಥವೆ? ■



Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65